# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-41ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ಎಂದಿನಂತೆ ದಿನಾಂಕ: 17.10.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.41, ಪೀಣ್ಯ ವಾರ್ಡ್ ಸಮಿತಿ ಸಭೆಯನ್ನು ಗೊರಗುಂಟೆಪಾಳ್ಯ ಉಪವಿಭಾಗದ, ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.

ಸಭೆಗೆ ಹಾಜರಿದ್ದ ಅಧಿಕಾರಿಗಳು:-

1. ಶ್ರೀ.ಹೆಚ್.ಭೀಮೇಶ್, ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಬಿಬಿಎಂಪಿ. ಹಾಗೂ ವಾರ್ಡ್ 41ರ ನೋಡಲ್ ಅಧಿಕಾರಿಗಳು.
2. ಶ್ರೀ. ನಾರಾಯಣ ಹಿರಿಯ ಆರೋಗ್ಯ ಪರಿಪವೀಕ್ಷಕರು ವಾರ್ಡ್ ನಂ.41.
3. ಶ್ರೀಮತಿ.ತನುಜಾ. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.41
4. ಶ್ರೀ. ಸತೀಶ್, ಕಂದಾಯ ವಸೂಲಿಗಾರರು, ವಾರ್ಡ್ ನಂ.41.
5. ಶ್ರೀ. ನಾಗೇಶ್.ಹೆಚ್. ಪ್ರೆಸಿಡೆಂಟ್, ವಾರ್ಡ್ ನಂ.41
6. ಶ್ರೀಮತಿ.ಮೋಹಿನಿ.ಬಿ.ಕೆ. ಲಿಂಕ್ ವರ್ಕರ್ ವಾರ್ಡ್ ನಂ.41.
7. ಶ್ರೀಮತಿ.ಭಾರತಿ.ಎ. ಲಿಂಕ್ ವರ್ಕರ್ ವಾರ್ಡ್ ನಂ.41.
8. ಶ್ರೀ.ನಾರಾಯಣ್.ಎ.ಆರ್. ಎ.ಎಸ್.ಐ. ಪೀಣ್ಯ ಪೊಲೀಸ್ ಠಾಣೆ.

ವಾರ್ಡ್-41ರ ಪೀಣ್ಯ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ಆದ ರಾಜೇಶ್.ಬಿ.ಎನ್ ರವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಸಾರ್ವಜನಿಕರು ಮಾತನಾಡಿ ಅಶ್ರಯನಗರ 6ನೇ ಮುಖ್ಯ ರಸ್ತೆಯ ಆಸುಪಾಸಿನಲ್ಲಿ ರಾತ್ರಿಯ ವೇಳೆ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದದ್ದು ಈ ಕಾರಣ ಪೋಲಿಸ್ ಇಲಾಖೆ ರವರು ಗಸ್ತನ್ನು ಹೆಚ್ಚಿಸಲು ವಿನಂತಿಸಿದರು.

**ಕ್ರಮ:-ಆರ್.ಎಂ.ಸಿ ಯಾರ್ಡ್ ಪೋಲಿಸ್ ಸ್ಟೇಷನ್ ಸಂಚಾರ**

ವಾರ್ಡ್-41 ಪೀಣ್ಯ (ಹಳೆನಂ-38 ವಾರ್ಡ್ ಎಚ್.ಎಂ.ಟಿ) ವಾರ್ಡ್ ಕಛೇರಿ ಮತ್ತು ಪಾಲಿಕೆ ಸದಸ್ಯರ ಕಛೇರಿ ಕಟ್ಟಡ ಕಂಪೌಂಡ ಮತ್ತು ಗೇಟ್‌ಗಳ ದುಸ್ಥಿಯಲ್ಲಿದ್ದು ವಿರೂಪಗೊಂಡಿರುತ್ತದೆ. ಈ ಕಟ್ಟಡಗಳನ್ನು ಬಳಕಗೆ ಯೋಗ್ಯಗೊಳಿಸಲು ತುರ್ತಾಗಿ ದುರಸ್ತಿಗೊಳಿಸಲು ಕಾರ್ಯ ಯೋಜನೆಯ ಅಡಿಯಲ್ಲಿ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಕೆಲಸ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

**ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಗೊರಗುಂಟೆಪಾಳ್ಯ**

**ಪು.ತೀ.ನೋ**

ಎಸ್ ಆರ್.ಎಸ್ ರೋಡ್, ಎನ್–5 ಬೇಸ್ಕಾಂ ಉಪ ವಿಭಾಗ ಹತ್ತಿರ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವ ಕಾರಣ ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿದ್ದು ಇದನ್ನು ತಡೆಗಟ್ಟಲು ಅಥವಾ ಕ್ರಮವಹಿಸಲು ಸೂಚಿಸಿರುತ್ತಾರೆ.

**ಕ್ರಮ:–ಬಿಬಿಎಂಪಿ ಪಶು ಸಂಗೋಪನೆ ಇಲಾಖೆ.**

ತುಮಕೂರು ಬೆಂಗಳೂರು ಹೆದ್ದಾರಿಯ ಪಕ್ಕದಲ್ಲಿರುವ ದಕ್ಷಿಣ ಡೆಲಿಕೆಸಿ ಹೋಟೆಲ್ ಹತ್ತಿರ ಮ್ಯಾನ್ ಹೋಲ್ ಕ್ಯಾಪ್ ಹಾಳಾಗಿದ್ದು ಈ ಕೂಡಲೇ ಹೊಸದಾಗಿ ಅಳವಡಿಸಲು ಸೂಚಿಸಿದರು.

**ಕ್ರಮ:– ಬಿ.ಡಬ್ಲ್ಯೂ.ಎಸ್.ಎಸ್.ಬಿ (ಸ.ಕಾ.ಅ).**

ಎಸ್.ಆರ್.ಎಸ್ ಜಂಕ್ಷನ್ ಇಂದ ಬೇಸ್ಕಾಂ ಎನ್–5 ಉಪವಿಭಗದವರೆಗೆ ಮರದ ಕೊಂಬೆಗಳು ಬೆಳೆದಿದ್ದು, ಸದರಿ ರಸ್ತೆಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ಅಡಚಣೆ ತೆರುವುಗೊಳಿಸಲು ಈ ಮೂಲಕ ಸೂಚಿಸಿದೆ.

**ಕ್ರಮ:–ಬಿ.ಬಿ.ಎಂ.ಪಿ (ಅರಣ್ಯ ಇಲಾಖೆ).**

ಬಿ.ಬಿ.ಎಂ.ಪಿ ವಾರ್ಡ್ ಕಛೇರಿಯ ಪಕ್ಕದ ರಸ್ತೆಯಲ್ಲಿ ಹೊಸದಾಗಿ ವಿದ್ಯುತ್ ದೀಪದ ಕಂಬಗಳನ್ನು ಅಳವಡಿಸಲು ಬಿಬಿಎಂಪಿ ವಿದ್ಯುತ್ ವಿಭಾಗಕ್ಕೆ ಸೂಚಿಸಿದರು.

**ಕ್ರಮ:–ಬಿ.ಬಿ.ಎಂ.ಪಿ (ವಿದ್ಯುತ್ ಇಲಾಖೆ).**

ವಾರ್ಡ್–41ರಲ್ಲಿ ಅನೇಕ ಹಳೆಯ ಬೋರ್‌ವೆಲ್ ಹೋಲ್‌ಗಳಿದ್ದು ಸುಮಾರು ದಿನಗಳಿಂದ ಸುರಿದ ಬಾರಿ ಮಳೆಯಿಂದಾಗಿ ಭೂಮಿಯೊಳಗಿನ ನೀರಿನ ಅಂತರ್ಜಲ ಮಟ್ಟದ ಹೆಚ್ಚಾಗಿರುವ ಕಾರಣ ವಾರ್ಡ್‌ಗಳಿಲ್ಲಿರುವ ಹಳೆಯ ಬೋರ್‌ವೆಲ್ ಹೋಲ್‌ಗಳಿಗೆ ಹೊಸದಾಗಿ ಮೋಟರ್ ಮತ್ತು ಪೈಪ್ ಗಳನ್ನು ಅಳವಡಿಸಿ ಸಾರ್ವಜನಿಕರಿಗೆ ದಿನನಿತ್ಯದ ಬಳಕೆಗೆ ಉಪಯೋಗವಾಗುವಂತೆ ಕ್ರಮವಹಿಸಲು ಸೂಚಿಸಿರುತ್ತಾರೆ.

**ಕ್ರಮ:–ಬಿ.ಬಿ.ಎಂ.ಪಿ (ವಿದ್ಯುತ್ ಇಲಾಖೆ).**

ಟಿ.ವಿ.ಎಸ್. ಕ್ರಾಸ್ ರಸ್ತೆ ಯಿಂದ ಪೀಣ್ಯ ಪೋಲಿಸ್ ಠಾಣೆ ರಸ್ತೆಯ ವರೆಗೆ ತುಂಬಾ ಗುಂಡಿಗಳು ಇದ್ದು ಸಾರ್ವಜನಿಕರ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು, ಕೂಡಲೇ ಗುಂಡಿಗಳನ್ನು ಮುಚ್ಚಿಸಲು ಕೋರಿದರು

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ರೋಡ್ ಇನ್ಫ್ರಾ, (ರಾರಾನಗರ)ವಲಯ**

Rajashekar.

ಕಿರಿಯ ಅಭಿಯಂತರರು
ಮತ್ತು ಸದಸ್ಯ ಕಾರ್ಯದರ್ಶಿ
ವಾರ್ಡ್–41.

ವಾರ್ಡ್ ನೋಡಲ್ ಅಧಿಕಾರಿ ಹಾಗೂ
ಕಾ.ಪಾ.ಅ (ಎಸ್.ಡ್ಬ್ಯೂ.ಎಂ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.